**ಡಿಎನ್‌ಡಿ ಮತ್ತು ಯುಸಿಸಿ ರಕ್ಷಣೆ**

**ಅನಪೇಕ್ಷಿತ ವಾಣಿಜ್ಯ ಸಂವಹನ (ಯುಸಿಸಿ) ಪಡೆಯುವುದನ್ನು ತಪ್ಪಿಸುವುದು ಹೇಗೆ?**

ಗ್ರಾಹಕರು ಎಲ್ಲಾ ವಾಣಿಜ್ಯ ಸಂವಹನಗಳನ್ನು (ಕರೆಗಳು ಮತ್ತು ಎಸ್‌ಎಂಎಸ್) ನಿರ್ಬಂಧಿಸಬಹುದು ಅಥವಾ ಏಳು ನಿರ್ದಿಷ್ಟ ವರ್ಗಗಳಿಂದ ಅನಗತ್ಯ ಯುಸಿಸಿ ಗಳನ್ನು ನಿರ್ಬಂಧಿಸಬಹುದು:

1. ಬ್ಯಾಂಕಿಂಗ್/ವಿಮೆ/ಹಣಕಾಸು ಉತ್ಪನ್ನಗಳು/ಕ್ರೆಡಿಟ್ ಕಾರ್ಡ್‌ಗಳು
2. ರಿಯಲ್ ಎಸ್ಟೇಟ್
3. ಶಿಕ್ಷಣ
4. ಆರೋಗ್ಯ
5. ಗ್ರಾಹಕ ವಸ್ತುಗಳು ಮತ್ತು ವಾಹನಗಳು
6. ಸಂವಹನ / ಪ್ರಸಾರ / ಮನರಂಜನೆ / ಐಟಿ
7. ಪ್ರವಾಸೋದ್ಯಮ ಮತ್ತು ವಿರಾಮ.
   ಡಿಎನ್‌ಡಿ ರಿಜಿಸ್ಟ್ರಿ ಎಂದೂ ಸಹ ಕರೆಯಲ್ಪಡುವ ರಾಷ್ಟ್ರೀಯ ಗ್ರಾಹಕ ಆದ್ಯತೆ ನೋಂದಣಿ (ಎನ್‌ಸಿಪಿಆರ್) ಯಲ್ಲಿ ಆದ್ಯತೆಗಳನ್ನು ನೋಂದಾಯಿಸುವ ಮೂಲಕ ಇದನ್ನು ಮಾಡಬಹುದು.

**ಎನ್‌ಸಿಪಿಆರ್ ನಲ್ಲಿ ನೋಂದಾಯಿಸಲು ಇರುವ ಕಾರ್ಯವಿಧಾನವೇನು?**

**ಡಿಎನ್‌ಡಿ ನೋಂದಣಿ:**

ಯುಸಿಸಿ ಯಿಂದ ಉಂಟಾಗುವ ಅನಾನುಕೂಲತೆಯನ್ನು ತಪ್ಪಿಸಲು, ಗ್ರಾಹಕರು ಟೆಲಿಕಾಂ ಸೇವಾ ಪೂರೈಕೆದಾರರ ಅಪ್ಲಿಕೇಶನ್/ವೆಬ್‌ಸೈಟ್, ಟ್ರಾಯ್ ಡಿಎನ್‌ಡಿ ಅಪ್ಲಿಕೇಶನ್  ನಿಂದ ಅಥವಾ '1909' ಕ್ಕೆ ಕರೆಮಾಡುವ/ ಎಸ್‌ಎಂಎಸ್ ಕಳುಹಿಸುವ ಮೂಲಕ ಎಲ್ಲಾ ವಾಣಿಜ್ಯ ಸಂವಹನಗಳನ್ನು ಅಥವಾ ಆದ್ಯತೆಯ ವರ್ಗಗಳ ಪ್ರಕಾರ ಅನಗತ್ಯವಾದದ್ದನ್ನು ನಿರ್ಬಂಧಿಸಲು ಆಯ್ಕೆ ಮಾಡಬಹುದು.

**ದೂರು ನೀಡುವ ಕಾರ್ಯವಿಧಾನವೇನು?**

**ದೂರುಗಳ ನೋಂದಣಿ:**

1. ಡಿಎನ್‌ಡಿ ನಲ್ಲಿ ನೋಂದಾಯಿಸಿದ ನಂತರವೂ ನೀವು ಸ್ಪ್ಯಾಮ್ ಸ್ವೀಕರಿಸಿದರೆ: ನಿಮ್ಮ ಸಂಬಂಧಿತ ಟೆಲಿಕಾಂ ಸೇವಾ ಪೂರೈಕೆದಾರರ ಅಪ್ಲಿಕೇಶನ್/ ವೆಬ್‌ಸೈಟ್, ಟ್ರಾಯ್ ಡಿಎನ್‌ಡಿ ಅಪ್ಲಿಕೇಶನ್ ನಿಂದ ಅಥವಾ '1909' ಕ್ಕೆ ಕರೆ ಮಾಡುವ/ ಎಸ್‌ಎಂಎಸ್ ಕಳುಹಿಸುವ ಮೂಲಕ ಡಿಎನ್‌ಡಿ ದೂರನ್ನು ಸಲ್ಲಿಸಿ.
2. ನೀವು ಶಂಕಿತ ವಂಚನೆಯ ಸಂವಹನವನ್ನು ಸ್ವೀಕರಿಸಿದರೆ: ಕಳೆದ 30 ದಿನಗಳಲ್ಲಿ ಸ್ವೀಕರಿಸಿದ ಯಾವುದೇ ಶಂಕಿತ ವಂಚನೆಯ ಸಂವಹನವನ್ನು ದೂರಸಂಪರ್ಕ ಇಲಾಖೆಯ (ಡಿಓಟಿ) 'ಚಕ್ಷು' ವೇದಿಕೆಯಲ್ಲಿ https://sancharsaathi.gov.in/sfc/ ವರದಿ ಮಾಡಿ.
3. ವಂಚನೆ ಅಥವಾ ಸೈಬರ್-ಅಪರಾಧ ಈಗಾಗಲೇ ನಡೆದಿದ್ದರೆ: ನೀವು ಈಗಾಗಲೇ ಹಣಕಾಸಿನ ವಂಚನೆಯಿಂದಾಗಿ ಹಣವನ್ನು ಕಳೆದುಕೊಂಡಿದ್ದರೆ ಅಥವಾ ಸೈಬರ್ ಅಪರಾಧಕ್ಕೆ ಬಲಿಯಾಗಿದ್ದರೆ, ಅಂತಹ ಘಟನೆಯನ್ನು ಸೈಬರ್ ಅಪರಾಧ ಸಹಾಯವಾಣಿ ಸಂಖ್ಯೆ '1930' ಕ್ಕೆ ಅಥವಾ https://www.cybercrime.gov.in ವೆಬ್‌ಸೈಟ್ ಮೂಲಕ ವರದಿ ಮಾಡಿ.